1013 (1047) ಶ್ರೀ ಜೀವಿಜಯ ಬಿ ಎ (ಸೋಮವಾರಪೇಟೆ). ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) 12ನೇ ಹಣಕಾಸು ಯೋಜನೆಯಡಿಯಲ್ಲಿ ರಾಜ್ಯ ಸರ್ಕಾರದಿಂದ ಗ್ರಾಮೀಣಾಭಿವೃದ್ಧಿ ಇಲಾಖೆಗೆ ಎಷ್ಟು ಹಣವನ್ನು ಬಿಡುಗಡೆಗೊಳಿಸಲಾಗಿದೆ,

ಆ) ಈ ಹಣದಲ್ಲಿ ಕೊಡಗಿನ 3 ತಾಲ್ಲೂಕುಗಳಿಗೆ ಬಿಡುಗಡೆಯಾದ ಹಣವೆಷ್ಟು,

ಇ) ಯಾವ ಮಾನದಂಡದ ಆಧಾರದ ಮೇಲೆ ಹಣವನ್ನು ಬಿಡುಗಡೆ ಮಾಡಲಾಗಿದೆ?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) 12ನೇ ಹಣಕಾಸು ಆಯೋಗದಡಿ ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದ ವಿವರ ಈ ಕೆಳಕಂಡಂತಿರುತ್ತದೆ

ಪಂಚಾಯತ್‌ರಾಜ್ ಸಂಸ್ಥೆಗಳಿಗೆ

2005–06	ರೂ 176 60 ಕೋಟಿ
2006–07	ರೂ 88 80 ಕೋಟಿ

ಗ್ರಾಮೀಣ ರಸ್ತೆ ಮತ್ತು ಕಟ್ಟಡಗಳ ನಿರ್ವಹಣೆಗೆ ಬಿಡುಗಡೆಯಾದ ಅನುದಾನ

2005–06	ಅನುದಾನ ಒದಗಿಸಿರುವುದಿಲ್ಲ
2006–07	ರೂ 105 31 ಕೋಟಿ

ಆ) ಪಂಚಾಯತ್ ರಾಜ್ ಸಂಸ್ಥೆಗಳಿಗೆ ಸಂಬಂಧಿಸಿದಂತೆ ಕೊಡಗಿನ 3 ತಾಲ್ಲೂಕುಗಳಿಗೆ ಬಿಡುಗಡೆಯಾದ ಹಣ ಕೆಳಕಂಡಂತಿರುತ್ತದೆ

	ತಾ ಪಂ ವಾರು	ಗ್ರಾ ಪಂ ತಾಲ್ಲೂಕುವಾರು
ಮಡಿಕೇರಿ	ರೂ 14 16 ಲಕ್ಷ	ರೂ 16 53 ಲಕ್ಷ
ಸೋಮವಾರಪೇಟೆ	ರೂ 20 28 ಲಕ್ಷ	ರೂ 23 64 ಲಕ್ಷ
ವಿರಾಜಪೇಟೆ	ರೂ 17 13 ಲಕ್ಷ	ರೂ 19 99 ಲಕ್ಷ

ಗ್ರಾಮೀಣ ರಸ್ತೆ ಮತ್ತು ಕಟ್ಟಡಗಳ ನಿರ್ವಹಣೆಗೆ

ಮಡಿಕೇರಿ	ರೂ 50 11 ಲಕ್ಷ
ಸೋಮವಾರಪೇಟೆ	ರೂ 41 63 ಲಕ್ಷ
ವಿರಾಜಪೇಟೆ	ರೂ 58 70 ಲಕ್ಷ

ಇ) ಡಾ ಡಿ ಎಂ ನಂಜುಂಡಪ್ಪ ಇವರ ವರದಿಯನ್ನು ಆಧರಿಸಿ ಹಿಂದುಳಿಯವಿಕೆಯ ಆಧಾರದ ಮೇಲೆ ಗ್ರಾಮ/ ತಾಲ್ಲೂಕು/ ಜಿಲ್ಲಾ ಪಂಚಾಯತಿಗಳಿಗೆ ತಲಾ ಶೇಕಡಾ 70 20 10 ರಂತೆ ಹಂಚಿಕೆ ಮಾಡಲಾಗಿದೆ

ರಸ್ತೆ ಮತ್ತು ಸೇತುವೆಗಳ ನಿರ್ವಹಣಾ ಅನುದಾನವನ್ನು ರಸ್ತೆಯ ಉದ್ದಳತೆಯ ಆಧಾರದ ಮೇಲೆ ಹಾಗೂ ಕಟ್ಟಡಗಳ ನಿರ್ವಹಣಾ ಅನುದಾನವನ್ನು ಪ್ಲಿಂತ್ ಏರಿಯಾ ಆಧ್ಹಾರದ ಮೇಲೆ ಹಂಚಿಕೆ ಮಾಡಲಾಗಿದೆ

1014 (1294) ಶ್ರೀ ಕೃಷ್ಣಮೂರ್ತಿ ಕೆ ಎಂ ಶಾಸಕರು (ಕಡೂರು) ಮಾನ್ಯ ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಸಕ್ಕರೆ ಖಾತೆ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಬರದಿಂದ ತತ್ತರಿಸಿರುವ ಕಡೂರು ವಿಧಾನಸಭಾ ಕ್ಷೇತ್ರಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು,

ಆ) ಈ ಸಮಸ್ಯೆಯನ್ನು ಬಗೆಹರಿಸಲು ಟಾಸ್ಕ್‌ಫೋರ್ಸ್ ಸಮಿತಿಗಳಿಗೆ ಹಣ ಬಿಡುಗಡೆ ಮಾಡುವ ವಿಚಾರ ಸರ್ಕಾರದ ಮುಂದಿದೆಯೇ?

ಶ್ರೀ ಎಸ್ ಎ ರವೀಂದ್ರನಾಥ್ (ಗ್ರಾಮೀಣ ನೀರು ಸರಬರಾಜು, ನೈರ್ಮಲ್ಯ ಮತ್ತು ಸಕ್ಕರೆ ಖಾತೆ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೀವ್ರ ಸಮಸ್ಯೆ ಇರುವ 33 ಗ್ರಾಮಗಳನ್ನು ಗುರುತಿಸಿ ರೂ 63 00 ಲಕ್ಷದ ಕ್ರಿಯಾ ಯೋಜನೆ ತಯಾರಿಸಲಾಗಿದೆ,

ಆ) ಟಾಸ್ಕ್‌ಫೋರ್ಸ್ ಯೋಜನೆಯಡಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಕಡೂರು ಕ್ಷೇತ್ರಕ್ಕೆ ಈಗಾಗಲೇ ರೂ 15 707 ಲಕ್ಷ ಅನುದಾನ ಬಿಡುಗಡೆಯಾಗಿದೆ ಪೂರ್ಣಗೊಳಿಸಿರುವ ಅನುಮೋದಿತ ಕಾಮಗಾರಿಗಳ ವಾಸ್ತವಿಕತೆ ಆಧರಿಸಿ ಉಳಿದ ಹಣ ಬಿಡುಗಡೆ ಕುರಿತು ಪರಿಶೀಲಿಸಲಾಗುತ್ತಿದೆ